ಪ್ರದೇಶದ ಭಾಷೆಯ ಸಾಹಿತ್ಯವನ್ನು ಅಪ್ಪಿಕೊಂಡು ಮುಂದುವರೆಯುತ್ತದೆ. ಭರತನಾಟ್ಯ ಹಾಗಲ್ಲ. ಅತ್ತ ತಮಿಳು ಪದಗಳಿಗೆ ಸಲ್ಲುತ್ತದೆ, ಇತ್ತ ದಾಸರ ಪದಗಳಿಗೂ ಹೊಂದಿಕೆಯಾಗುತ್ತದೆ. ಸಂಸ್ಕೃತ ಶ್ಲೋಕಗಳಿಗೆ ಕೂಡ ಹೆಜ್ಜೆಗಾರಿಕೆ ಸಾಧ್ಯವಾಗುತ್ತದೆ. ಆದ್ದರಿಂದ ತಮ್ಮ ಮಕ್ಕಳು ಭಾರತೀಯ ವಿಚಾರವನ್ನು ಕಲಿಯಲಿ ಎಂಬ ಆಶಯ ಹೊಂದಿರುವ ಪೋಷಕರು ಭರತನಾಟ್ಯವನ್ನು ಹೆಚ್ಚು ಇಷ್ಟಪಡುತ್ತಾರೆ. ಅದರಲ್ಲಿರುವ ಶಿಸ್ತು ನಮ್ಮ ಪೂರ್ವಸೂರಿಗಳ ಜ್ಞಾನವನ್ನು ಅರಗಿಸಿಕೊಂಡು ಬೆಳೆದಿದೆ. ಭಾರತೀಯ ಪುರಾಣ ಕಥೆಗಳನ್ನು ಅದು ಪ್ರಸ್ತುತಪಡಿಸುವ ಶೈಲಿಯು ಆಪ್ತವಾಗಿರುತ್ತದೆ. ವಿಷ್ಣು, ಶಕ್ತಿ, ಶೈವ ಪಂಥದ ಕಥೆಗಳನ್ನು ಅಭಿವ್ಯಕ್ತಿಗೊಳಿಸಲು ಈ ಪ್ರಕಾರವು ಸುಲಭರೀತಿಯಲ್ಲಿ ಒದಗಿಬರುತ್ತದೆ ಕೂಡ.

ರುಕ್ಮಿಣಿ ದೇವಿ ಅರುಂಡೇಲು ಅವರು ಭರತನಾಟ್ಯಕ್ಕೆ ವರ್ಚಸ್ಸು ತಂದುಕೊಟ್ಟ ಬಳಿಕ, ಮೊದಲ ಸಾಲಿನ ಕಲಾವಿದರು ಆ ಪರಂಪರೆಯನ್ನು ಗೌರವ ಮತ್ತು ಆಸ್ಥೆಯಿಂದ ಮುಂದುವರೆಸಿದರು. ಅದು ವಿದೇಶಗಳಿಗೂ ಹಬ್ಬಿ ತನ್ನ ಶಾಖೆಗಳನ್ನು ವಿಸ್ತರಿಸಿತು. ಅಲ್ಲದೆ ಭರತನಾಟ್ಯದಲ್ಲಿ ಭಾರತೀಯತೆಯ ಭಾವವು ಹೆಚ್ಚು ಆಪ್ತವಾಗಿ ಬೆಳಗುವಂತೆ ಭಾಸವಾಗುವುದರಿಂದ, ನೃತ್ಯ ಕಲಿಯದೇ ಇರುವವರಿಗೂ ಅದರ ಮೇಲೆ ಅಪಾರ ಗೌರವ ಮೂಡುವಂತಿದೆ. ದಕ್ಷಿಣದ ರಾಜ್ಯಗಳಲ್ಲಿ ಅದು ರಾಜಾಶ್ರಯದೊಂದಿಗೆ ಬೆಳೆದು ಬಂದ ಕಲೆ ಎನ್ನುವುದನ್ನು ನಾವು ಮರೆಯುವಂತಿಲ್ಲ. ಗುಜರಾತ್, ಬಂಗಾಳ ಪ್ರದೇಶದಲ್ಲಿ ಅವರದ್ದೇ ಆದ ಜನಪದ ಪ್ರಕಾರಗಳಿವೆ. ಅವುಗಳ ಮಧ್ಯೆ ಭರತನಾಟ್ಯಕ್ಕೆ ಹೆಚ್ಚಿನ ಮಹತ್ವವಿದೆ. ಆದ್ದರಿಂದ ಭರತನಾಟ್ಯವು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ, ಬರೋಡಾದಿಂದ ಮಣಿಪುರದವರೆಗೆ ಪ್ರಚಲಿತವಾಗಿದೆ. ಭರತನಾಟ್ಯವು ನಮ್ಮ ರಾಷ್ಟ್ರದ ಪ್ರಾತಿನಿಧಿಕ ಕಲೆ ಎನ್ನಬಹುದು.

ಬಿಹಾರ, ಜಾರ್ಖಂಡ್, ಪಂಜಾಬ್ ಮುಂತಾದ ಕಡೆಗಳಲ್ಲಿ ಭರತನಾಟ್ಯವನ್ನೇ ಜನರು ಇಷ್ಟಪಡುತ್ತಾರೆ. ಅಲ್ಲಿ ಅದು ಭರತನಾಟ್ಯವೆಂದೇನೂ ಕರೆಸಿಕೊಳ್ಳುವುದಿಲ್ಲ. ಆದರೆ ಜನರು ಪ್ರೀತಿಯಿಂದ ಅದನ್ನು 'ಮದರಾಸಿ ನೃತ್ಯ'ವೆಂದು ಕರೆಯುತ್ತಾರೆ. ವಿದ್ವತ್, ಪ್ರಶಸ್ತಿಗಳು, ಅಧ್ಯಯನಗಳನ್ನು ಗಮನಿಸಿದರೂ, ಭರತನಾಟ್ಯ ಕ್ಷೇತ್ರದಲ್ಲಿ ಅತೀ ಹೆಚ್ಚು ಕೆಲಸಗಳಾಗಿವೆ.

ಶೇ. 50ರಷ್ಟು ನೃತ್ಯಪಟುಗಳು ಭರತನಾಟ್ಯದಲ್ಲಿ ಸಕ್ರಿಯರಾಗಿದ್ದರೆ, ಶೇ. 25ರಷ್ಟು ಕಲಾವಿದರು ಕಥಕ್ ಆಯ್ಕೆ ಮಾಡಿಕೊಳ್ಳುವರು. ಅಂದರೆ ಎರಡನೆಯ ಸ್ಥಾನ ಕಥಕ್‌ಗೆ ಸಲ್ಲುತ್ತದೆ. ಉತ್ತರ ಭಾರತ, ಮಧ್ಯ ಭಾರತ, ಹಿಂದಿ, ಅವಧಿ ಮುಂತಾದ ಪ್ರದೇಶಗಳಲ್ಲಿ ಹೆಚ್ಚು ಪ್ರಚಲಿತವಾಗಿರುವ ಕಥಕ್‌ಗೆ ರಾಜಾಶ್ರಯ ದೊರೆತಿದೆ. ಜಯಪುರ ಘರಾನಾ, ಲಕ್ನೋ ಘರಾನಾ, ಲಾಹೋರ್ ಘರಾನಾ ಮುಂತಾದ ಪೋಷಣೆಯೂ ದೊರೆಯಿತು.

ಒಡಿಸ್ಸಿ ನೃತ್ಯದ ಪ್ರಸಿದ್ಧಿಯು ನಮ್ಮ ದೇಶದಲಿ ಶೇ. 15ರಷ್ಟಿದೆ ಎನ್ನಬಹುದು. ಬೆಂಗಳೂರಿನಲ್ಲಿಯೇ ಕಥಕ್ ಅಥವಾ ಭರತನಾಟ್ಯ ಹೊರತುಪಡಿಸಿದರೆ ಒಡಿಸ್ಸಿ ನೃತ್ಯವೇ ಹೆಚ್ಚು ಜನಪ್ರಿಯ. ಈ ನೃತ್ಯಕ್ಕೆ ಜಾಗತಿಕ ಮನ್ನಣೆ ದೊರೆತಿರುವುದು ಇದಕ್ಕೆ ಕಾರಣವಿರಬಹುದು. ಮೈಕೇಲ್ ಜಾಕ್ಸನ್ ಒಮ್ಮೆ ಒಂದು ವಿಡಿಯೊದಲ್ಲಿ ಒಡಿಸ್ಸಿಯ ತುಣುಕೊಂದನ್ನು ಸೇರಿಸಿದಾಗ, ಎಲ್ಲರೂ ಇದ್ಯಾವ ಕಲೆಯೆಂದು ಕಣ್ಣೆತ್ತಿ ಹುಡುಕುವಂತಾಯಿತು. ಇನ್ನು ನಮ್ಮ ದೇಶದ ಕಲಾವಿದರು ವಿದೇಶಗಳಲ್ಲಿ ಈ ಕಲಾಪ್ರಕಾರವನ್ನು ಹೆಚ್ಚು ಪ್ರಚುರಪಡಿಸಿದ್ದೂ ಅದರ ಜನಪ್ರಿಯತೆಗೆ ಒಂದು ಕಾರಣವೇ.

◆ **ಭಾರತದಲ್ಲಿ ಪ್ರತಿಯೊಂದು ರಾಜ್ಯದಲ್ಲಿಯೂ ಜನಪ್ರಿಯವಾದ, ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳನ್ನು ಜನರ ಬಳಿಗೆ ಕೊಂಡೊಯ್ಯುವ ಕಲಾಪ್ರಕಾರಗಳು ಇದ್ದೇ ಇರುತ್ತವೆ. ಅವುಗಳನ್ನು ಮೀರಿ ನೀವು ಗುರುತಿಸಿದ ಭರತನಾಟ್ಯ, ಕಥಕ್, ಒಡಿಸ್ಸಿ ನೃತ್ಯವು ಜನಪ್ರಿಯಗೊಳ್ಳಲು ಕಾರಣವೇನು?**

ನಮ್ಮ ದೇಶದ ಪ್ರತೀ ಹಳ್ಳಿ, ಊರು, ರಾಜ್ಯಗಳಲ್ಲಿ ಶ್ರೀಮಂತ ಕಲಾಪ್ರಕಾರಗಳಿವೆ. ಆಯಾ ಜನಸಮುದಾಯ ಅವುಗಳನ್ನು ನಿಷ್ಠೆಯಿಂದ ಪೋಷಿಸುತ್ತ ಬಂದಿದೆ. ಆದರೆ, ನಾನು ಗುರುತಿಸಿದ ನಾಲ್ಕು ನೃತ್ಯ ಪ್ರಕಾರಗಳಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕು. ಇವುಗಳನ್ನು ಅಭ್ಯಾಸ ಮಾಡಿದ ಕಲಾವಿದರು ವೇದಿಕೆಯಲ್ಲಿ ಏಕವ್ಯಕ್ತಿ ಪ್ರದರ್ಶನ ನೀಡುವುದು ಸಾಧ್ಯ. ಉಳಿದಂತೆ ಕಥಕಳಿ, ಮಣಿಪುರಿ